ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ

೨ನೇ ಮತ್ತು ೩ನೇ ಖಂಡಗಳು ವಿಧೇಯಕದ ಅಂಗಗಳು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. (೨ನೇ ಮತ್ತು ೩ನೇ ಖಂಡಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು.)

ಮೊದಲನೇ ಖಂಡ, ಹೆಸರು ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ.—

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯದ ಅಂಗಗಳು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. (ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಅನುಮೋದನಾ ಪ್ರಸ್ತಾವ

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಪ್ರಸ್ತಾವವನ್ನು ಮಂಡಿಸಬಹುದು.

ಶ್ರೀ ವಿ. ಎಲ್. ಪಾಟೀಲ್.—ಈ ಕೆಳಗಿನ ಪ್ರಸ್ತಾವವನ್ನು ಮಂಡಿಸುತ್ತೇನೆ. **ಕರ್ನಾಟಕ ಭೂ ಕಂದಾಯ** (ತಿದ್ದುಪಡಿ) ವಿಧೇಯಕ ೧೯೮೩ ನ್ನು ಸಭೆಯು ಅನುಮೋದಿಸುತ್ತದೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ೧೯೮೩ನ್ನು ಸಭೆಯು ಅನುಮೋದಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟು ವಿಧೇಯಕವು ಅನುಮೋದಿಸಲ್ಪಟ್ಟಿತು.

ಖಾಸಗಿ ನಿರ್ಣಯಗಳು

ವಿಷಯ:—ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ

† ಶ್ರೀ ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ. ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಆಗಬೇಕೆಂಬುದು ಬಹಳ ವರ್ಷಗಳಿಂದ ನಮ್ಮ ಜಿಲ್ಲೆಯ ಬೇಡಿಕೆಯಾಗಿತ್ತು. ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದವರು ಸ್ಪಷ್ಟವಾಗಿ ೩೦ಕ್ಕಿಂತ ಹೆಚ್ಚು ಕಾಲೇಜುಗಳಿರಬಾರದು, ಜಾಸ್ತಿ ಎಂದರೆ ೬೫ ಕಾಲೇಜುಗಳು ಒಳಪಟ್ಟಿರುವಂತೆ ವಿಶ್ವವಿದ್ಯಾನಿಲಯವನ್ನು ಮಾಡಬಹುದು ಎಂದು ಗಜೇಂದ್ರಗಡ್ ಅವರ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಸಹ್ಯಾದ್ರಿ ವಿಶ್ವವಿದ್ಯಾನಿಲಯ ಪ್ರಾರಂಭವಾಗಬೇಕೆಂಬ ಬೇಡಿಕೆ ಮೊದಲೇ ಇದ್ದು ನಂತರ ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯದ ಬೇಡಿಕೆ ಬಂತು. ನಮ್ಮದು ಹಳೇ ಬೇಡಿಕೆಯಾಗಿದ್ದರೂ ಸಹ ಅದನ್ನು ಮಾಡದೆ ಹಿಂದಿನ ಸರ್ಕಾರ ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯವನ್ನು ಮಾಡಿದೆ. ನಮ್ಮ ಜಿಲ್ಲೆಯಲ್ಲಿ ೧೯೭೦ನೇ ಇಸವಿಯಲ್ಲೇ ಪಿ.ಜಿ. ಸೆಂಟರ್ ಅನ್ನು ಪ್ರಾರಂಭ ಮಾಡಿದ್ದಾರೆ. ೧೯೭೮ರಲ್ಲಿ ೫೦ ಲಕ್ಷ ರೂಪಾಯಿಗಳನ್ನು ಯು.ಜಿ.ಸಿ ಯವರು ಖರ್ಚು ಮಾಡಲಿಕ್ಕೆ ಕೊಟ್ಟಿದ್ದರು. ಇಷ್ಟೆಲ್ಲಾ ಹಣ ಇದ್ದರೂ ಸಹ ಆ ಸಂದರ್ಭದಲ್ಲಿ ಯು.ಜಿ.ಸಿ. ಯವರು ಕೊಟ್ಟ ಹಣವನ್ನು ಉಪಯೋಗ ಮಾಡಿಕೊಳ್ಳಲಿಲ್ಲ. ಮತ್ತು ಅದರ ಪ್ರಗತಿಯ ದೃಷ್ಟಿಯಿಂದ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ.

೩ ಪಿ.ಎಂ.

ಶಿವಮೊಗ್ಗ ಜಿಲ್ಲೆ ಒಂದಲ್ಲ ಒಂದು ಕಾರಣಕ್ಕೋಸ್ಕರ ಯಾವುದೇ ಒಂದು ಸೌಕರ್ಯವನ್ನು ಹೊಂದುತ್ತಾ ಬಂದಿಲ್ಲ. ಅಲ್ಲಿ ಮೆಡಿಕಲ್ ಕಾಲೇಜು ಆಗಬೇಕು, ವ್ಯವಸಾಯ ಕಾಲೇಜು ಆಗಬೇಕು ಎಂದು ನಾವು ಹೋರಾಟ ಮಾಡಿದೆವು. ಇಂಜಿನಿಯರಿಂಗ್ ಕಾಲೇಜು ಇತ್ತೀಚೆಗೆ ಆಯಿತೇ ಹೊರತು ನಮ್ಮ ಶಿವಮೊಗ್ಗಕ್ಕೆ ಯಾವುದೇ ಅನುಕೂಲ ಸರಿಯಾಗಿ ಸಿಕ್ಕಿಲ್ಲ. ನಮ್ಮ ಜಿಲ್ಲೆಯಿಂದ ಬಹಳ ಜನರು ಮಂತ್ರಿಗಳಾದರು. ಎಷ್ಟೋ ಜನ ನುರಿತ ಶಾಸಕರು ಬಂದರು. ಆದರೂ ಸಹಾ

ಯಾವುದೋ ರಾಜಕೀಯ ಒತ್ತಡದಿಂದಾಗಿ ನಮ್ಮಲ್ಲಿ ವಿಶ್ವವಿದ್ಯಾನಿಲಯ ಪ್ರಾರಂಭವಾಗಿಲ್ಲ. ಹಿಂದೆ ಡಿ.ವಿ. ಅರಸ್ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿ ಕೂಡಾ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಹೇಳಿದೆ. ಇವತ್ತು ಶಿವಮೊಗ್ಗದಲ್ಲಿ ಪಿ.ಜಿ. ಸೆಂಟರ್‌ಗೆ ಜಾಗ ಕೊಟ್ಟಿದ್ದು, ಅಲ್ಲಿ ಈಗಾಗಲೇ ೬೦೦ ಎಕರೆ ಜಮೀನು ಕೊಡಲಾಗಿದೆ. ಅದೂ ಅಲ್ಲದೇ ಟಿ. ಎಂ. ಪೈಗವರೂ ಸಹಾ ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವಾದರೆ ಅದು ಇಡೀ ದೇಶಕ್ಕೇ ಒಂದು ಮಾದರಿ ವಿಶ್ವ ವಿದ್ಯಾನಿಲಯ ಆಗುತ್ತದೆಂದು ಹೇಳಿದ್ದಾರೆ. ಹಿಂದಿನ ಸರ್ಕಾರದ ಮಂತ್ರಿಮಂಡಲದ ಸಭೆ ಶಿವಮೊಗ್ಗದಲ್ಲಿ ಸೇರಿದ್ದಾಗ, ಇಲ್ಲಿ ವಿಶ್ವವಿದ್ಯಾನಿಲಯ ಆಗಬೇಕು. ಅದಕ್ಕೋಸ್ಕರ ಬಜೆಟ್‌ನಲ್ಲಿ ೧೦ ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೇವೆಂದು ಹೇಳಿದ್ದರು. ಆದರೂ ಕೂಡ ಇಲ್ಲಿ ವಿಶ್ವವಿದ್ಯಾನಿಲಯವಾಗಿಲ್ಲ. ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳು ನಗರಗಳ ಮಧ್ಯದಲ್ಲಿದ್ದು ವಿದ್ಯಾರ್ಥಿಗಳು ಸರಿಯಾಗಿ ವಿದ್ಯಾಭ್ಯಾಸ ಮಾಡುವುದಕ್ಕೆ ಏನು ಅನುಕೂಲಗಳು ಬೇಕೋ ಅದು ಇಲ್ಲವಾಗಿದೆ. ಶಿವಮೊಗ್ಗದಲ್ಲಿ ಪ್ರಕೃತಿ ಸೌಂದರ್ಯ ಇದೆ. ಒಂದಲ್ಲಾ ಒಂದು ಕಾರಣಕ್ಕೋಸ್ಕರ ಈ ಬಗ್ಗೆ ಮಲತಾಯಿದೋರಣೆ ತೋರಿಸುತ್ತಿರುವುದರಿಂದ ಅಲ್ಲಿ ವಿಶ್ವವಿದ್ಯಾನಿಲಯವಾಗಿಲ್ಲ. ಆದ್ದರಿಂದ, ಹಿಂದಿನ ಸರ್ಕಾರ ಕೊಟ್ಟಂತೆ ಬರೀ ಆಶ್ವಾಸನೆ ಕೊಡದೇ ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವುದಕ್ಕೆ ಸರ್ಕಾರ ಪ್ರಯತ್ನಪಡಬೇಕು. ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಿದ್ದಾಗ ಸಾರ್ವಜನಿಕ ಸಭೆಯಲ್ಲಿ ಈ ಬಗ್ಗೆ ಎಲ್ಲಾ ಸೌಕರ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡೋಣವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ವಿಶ್ವವಿದ್ಯಾನಿಲಯದ ಬೇಡಿಕೆ ಬಂದ ಮೇಲೆ ಬೇಡಿಕೆಯಾಗಿ ಬಂದ ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಈಗಾಗಲೇ ಪ್ರಾರಂಭವಾಗಿವೆ. ಆದರೆ ಈ ಒಂದು ವಿಶ್ವ ವಿದ್ಯಾನಿಲಯ ಇನ್ನೂ ಆಗಿಲ್ಲ. ಇವತ್ತು ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಸುಮಾರು ೮೫ ರಿಂದ ೯೦ ಕಾಲೇಜುಗಳು ಇವೆ. ಗಜೇಂದ್ರ ಗಡ್ಕರ್‌ರವರ ವರದಿ ಪ್ರಕಾರ ಯಾವುದೇ ಒಂದು ವಿಶ್ವ ವಿದ್ಯಾನಿಲಯದ ಅಧೀನದಲ್ಲಿ ಕಡಿಮೆ ಎಂದರೆ ೩೦ ಹಾಗೂ ಹೆಚ್ಚು ಎಂದರೆ ೬೫ರೊಳಗೆ ಕಾಲೇಜುಗಳು ಇರಬೇಕೆಂದು ಇದೆ. ಆದರೆ ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ೯೦ಕ್ಕೂ ಮೇಲ್ಪಟ್ಟ ಕಾಲೇಜುಗಳು ಇರುವುದರಿಂದ ಆಡಳಿತ ವಿಕೇಂದ್ರೀಕರಣದ ದೃಷ್ಟಿಯಿಂದ ಹಾಗೂ ಅನುಕೂಲಕರ ದೃಷ್ಟಿಯಿಂದ ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಮಾಡಿ ಅಲ್ಲಿಗೆ ಕೆಲವು ಕಾಲೇಜುಗಳನ್ನು ವಹಿಸಿಕೊಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಇಲ್ಲಿ ಪ್ರಕೃತಿ ಸೌಂದರ್ಯ ಹೆಚ್ಚು ಇದೆ. ಭದ್ರಾ ಅಣೆಕಟ್ಟು ಇದೆ. ಈ ರೀತಿಯ ಪ್ರಕೃತಿದತ್ತ ಜಾಗದಲ್ಲಿ ಈ ವಿಶ್ವವಿದ್ಯಾನಿಲಯವಾದಲ್ಲಿ ಕರ್ನಾಟಕ ರಾಜ್ಯಕ್ಕೇ ಅಲ್ಲ, ಇಡೀ ದೇಶಕ್ಕೆ ಒಂದು ಮಾದರಿ ವಿಶ್ವವಿದ್ಯಾನಿಲಯ ಆಗುತ್ತದೆಂದು ಈ ಒಂದು ಸಂದರ್ಭದಲ್ಲಿ ಈ ಬಗ್ಗೆ ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಆದ್ದರಿಂದ ಈ ವರ್ಷವೇ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಮಾಡುವ ಬಗ್ಗೆ ಸರ್ಕಾರ ತೀರ್ಮಾನ ಮಾಡಿಕೊಳ್ಳಬೇಕು. ಈ ಒಂದು ಕೆಲಸ ಆಗುತ್ತದೆಂದು ನಾನು ನಂಬಿಕೊಂಡಿದ್ದೇನೆ. ಆದ್ದರಿಂದ ಈ ಸರ್ಕಾರ ಹಿಂದಿನ ಸರ್ಕಾರದವರು ಕೊಟ್ಟಂತೆ ಆಶ್ವಾಸನೆಯನ್ನು ಮಾತ್ರ ಕೊಟ್ಟು ಸುಮ್ಮನಾಗದೇ ಆ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ ಅಲ್ಲಿ ಪಿ. ಜಿ. ಸೆಂಟರ್ ಆಗಿದೆ. ಇಲ್ಲಿ ವಿಶ್ವವಿದ್ಯಾನಿಲಯವಾದರೆ ಚಿಕ್ಕಮಂಗಳೂರು, ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಗೆ ಅನುಕೂಲವಾಗುತ್ತದೆ, ಈ ದೃಷ್ಟಿಯಿಂದ ಆದಷ್ಟು ಬೇಗ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರದಲ್ಲಿ ಮತ್ತೊಮ್ಮೆ ಒತ್ತಾಯ ತಂದು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಆನಂದರಾವ್.—(ಶಿವಮೊಗ್ಗ) ಸನ್ಮಾನ್ಯ ಅಧ್ಯಕ್ಷರೇ, ಈಗತಾನೇ ನನ್ನ ಮಿತ್ರರಾದ ಯಡಿಯೂರಪ್ಪನವರು ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ ಕೆಲವು ಕೆಲವು ಅಂಶಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಮಂಗಳೂರು ಕರ್ನಾಟಕ ಹಾಗೂ ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಇವೆ. ಈ ೫ ವಿಶ್ವವಿದ್ಯಾನಿಲಯಗಳಲ್ಲಿ ಮೈಸೂರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೈಸೂರು, ಹಾಸನ, ಚಿಕ್ಕಮಂಗಳೂರು, ಶಿವಮೊಗ್ಗ ಚಿತ್ರದುರ್ಗ ಹಾಗೂ ಮಂಡ್ಯ ಹೀಗೆ ೬ ಜಿಲ್ಲೆಗಳು ಸೇರಿಕೊಂಡಿವೆ. ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ತುಮಕೂರು, ಬೆಂಗಳೂರು, ಕೋಲಾರ ಈ ೩ ಜಿಲ್ಲೆಗಳು ಸೇರಿಕೊಂಡಿವೆ. ಮಂಗಳೂರು ವಿಶ್ವವಿದ್ಯಾಲಯಕ್ಕೆ ಕೊಡಗು, ದಕ್ಷಿಣ

ಕನ್ನಡ ಈ ಎರಡು ಜಿಲ್ಲೆಗಳು ಸೇರಿಕೊಂಡಿವೆ. ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಧಾರವಾಡ, ಉತ್ತರಕನ್ನಡ, ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳು ಸೇರಿಕೊಂಡಿದ್ದು, ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಬೀದರ್, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು ಸೇರಿಕೊಂಡಿವೆ. ಹೀಗೆ ಬೇರೆ ಬೇರೆ ಜಿಲ್ಲೆಗಳಿಗೆ ವಿಂಗಡಣೆಯಾಗಿವೆ. ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿ ೮೦ ಕಾಲೇಜುಗಳು ಇದ್ದು ಈ ವರ್ಷ ಕೊಟ್ಟ ಕಾಲೇಜುಗಳು ಸೇರಿದರೆ ಆ ಸಂಖ್ಯೆ ಇನ್ನೂ ಹೆಚ್ಚು ಆಗಬಹುದು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ೮೭ ಕಾಲೇಜುಗಳು ಮಂಗಳೂರು, ವಿಶ್ವವಿದ್ಯಾನಿಲಯದಲ್ಲಿ ೩೭ ಕಾಲೇಜುಗಳು, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ೭೫ ಕಾಲೇಜುಗಳು, ಗುಲ್ಬರ್ಗಾದಲ್ಲಿ ೩೯ ಕಾಲೇಜುಗಳು ಸೇರಿಕೊಂಡಿವೆ. ಗಜೇಂದ್ರ ಗಡ್ಕರ್‌ರವರ ವರದಿಯಲ್ಲಿ ಒಂದು ವಿಶ್ವವಿದ್ಯಾನಿಲಯದ ಅಧೀನದಲ್ಲಿ ೩೫ಕ್ಕಿಂತ ಕಡಿಮೆ ೭೫ಕ್ಕಿಂತಹೆಚ್ಚು ಕಾಲೇಜುಗಳು ಸೇರಿಸಿ ಅದನ್ನು ಸ್ಥಾಪನೆ ಮಾಡಬಹುದೆಂದು ನಾನು ಹೇಳುತ್ತೇನೆ. ಈಗಾಗಲೇಶಿವಮೊಗ್ಗದಲ್ಲಿನ ಪಿ, ಜಿ. ಸೆಂಟರ್‌ನಲ್ಲಿ ಇಂಡಸ್ಟ್ರಿಯಲ್ ಕೆಮಿಸ್ಟ್ರಿ. ಎನ್‌ವಿರೋನ್‌ಮೆಂಟಲ್ ಸೈನ್ಸ್, ಮ್ಯಾಥಮೆಟಿಕ್ಸ್, ಕನ್ನಡ ಮತ್ತು ಎಕನಾಮಿಕ್ಸ್ ಈ ವಿಷಯಗಳ ಬಗ್ಗೆ ತರಗತಿಗಳು ನಡೆಯುತ್ತಿದ್ದು ಆ ವಿಷಯಗಳ ಪ್ರಾಧ್ಯಾಪಕರು ಅಲ್ಲಿ ಇದ್ದಾರೆ. ಮಾನ್ಯ ಅಧ್ಯಕ್ಷರೇ ೧೯೭೭ರಲ್ಲಿ ಎ. ಆರ್. ಬದರೀನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಮಾಡಲಾಗಿತ್ತು. ಶಿವಮೊಗ್ಗ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದರ ಬಗ್ಗೆ ಆ ಸಮಿತಿ ಶಿಫಾರಸ್ಸು ಮಾಡಿತ್ತು. ಮತ್ತೂ ಕೂಡ ಡಿ. ವಿ. ಅರಸ್‌ರವರ ವರದಿಯಲ್ಲೂ ಕೂಡಾ ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯ ಮಾಡುವುದರಿಂದ ಹೆಚ್ಚು ಖರ್ಚು ಬೀಳುವುದಿಲ್ಲವೆಂದು ತಿಳಿಸಲಾಗಿದೆ.

The report reads as under:

"The cost of establishment of a University at Shimoga covering districts of Chickmagalur, Chitradurga and Shimoga will not be much as compared to the cost involved in the establishment of university at Mangalore and Gulbarga. There are lands to the extent of 400 acres at present available. Another 400 acres could be added. The number of colleges under this university will be 37 to start with."

ಈ ದೃಷ್ಟಿಯಿಂದಲೂ ಕೂಡ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ತುಂಬಾ ಅನುಕೂಲಗಳು ಇವೆ. ಅಲ್ಲದೆ ಶಿವಮೊಗ್ಗದ ಸಮೀಪದಲ್ಲಿರತಕ್ಕ ಈ ಸೆಂಟರ್ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಬಹಳ ಸಮೀಪದಲ್ಲಿವೆ. ಆ ದೃಷ್ಟಿಯಿಂದಲೂ ಕೂಡ ಬಹಳ ಅನುಕೂಲವಾಗುತ್ತದೆ. ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ವಿಶ್ವವಿದ್ಯಾನಿಲಯಕೋಸ್ಕರ ೫೦ ಲಕ್ಷ ರೂಪಾಯಿಗಳನ್ನು ಇಡಲಾಗಿತ್ತು. ಆದರೆ ರಾಜಕೀಯ ಕಾರಣಗೋಸ್ಕರ ಅದನ್ನು ಉಪಯೋಗ ಮಾಡಿಲ್ಲ. ಮತ್ತುಈ ವಿಶ್ವವಿದ್ಯಾನಿಲಯವನ್ನು ಈ ಜಿಲ್ಲೆಯಲ್ಲಿ ಮಾಡುವುದಕ್ಕೆ ಬೇಕಾದಷ್ಟು ಚಾರಿತ್ರಿಕ ಹಿನ್ನೆಲೆ ಕೂಡಾ ಇದೆ. ಅಕ್ಕಮಹಾದೇವಿಯವರ ಒಂದು ಪುಣ್ಯ ಕ್ಷೇತ್ರ ಕೂಡಾ ಇಲ್ಲಿ ಇದೆ. ಶಿಸ್ತಿನ ಶಿವಪ್ಪನಾಯ್ಕರ ಆಸ್ಥಾನ ಇಲ್ಲಿ ಇತ್ತು, ಪವಿತ್ರ ಯಾತ್ರಾ ಸ್ಥಳವಾದ ಶೃಂಗೇರಿ ಇಲ್ಲಿದೆ. ಬಾಳೇಹೊನ್ನೂರು ಇದೆ. ಕದಂಬರಾಜ್ಯದ ಚರಿತ್ರೆ ಇರತಕ್ಕ ಈ ಮಲೆನಾಡು ಪ್ರದೇಶದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ಎಲ್ಲಾ ಅವಕಾಶಗಳೂ ಇವೆ. ಈ ವಿಶ್ವವಿದ್ಯಾನಿಲಯ ಮಾಡುವುದರ ಬಗ್ಗೆ ಇಬ್ಬರು–ಮೂವರು ಮುಖ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರೂ ಇದುವರೆವಿಗೂ ಅದು ಕಾರ್ಯಗತವಾಗಿಲ್ಲ.

ಕಳೆದ ಡಿಸೆಂಬರ್‌ನಲ್ಲಿ ಶಿವಮೊಗ್ಗದಲ್ಲಿ ನಡೆದ ಸಚಿವಸಂಪುಟ ಸಭೆಯಲ್ಲೂ ಕೂಡಾ ಈ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ ತೀರ್ಮಾನ ಕೈಗೊಂಡಿದ್ದರೂ ಸಹಾ ಇದು ಆಗಿಲ್ಲ. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯವರೇ ಆದ ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆಯವರು ಏನು ಖಾಸಗಿ ನಿರ್ಣಯವನ್ನು ಮಂಡಿಸಿದ್ದಾರೆ, ಆ ಬಗ್ಗೆ ಸರ್ಕಾರ ಗಮನಕೊಟ್ಟು ಅಲ್ಲಿ ಆದಷ್ಟು ಬೇಗ

ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಬೇಕೆಂದು ಈ ಸಮಯದಲ್ಲಿ ಕೇಳುತ್ತಾ, ನನಗೆ ನಾಲ್ಕು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಜಿ. ಬಸವನಗೌಡ(ಹೊನ್ನಾಳಿ).— ಸನ್ಮಾನ್ಯ ಉಪಾಧ್ಯಕ್ಷರೆ, ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವ ಬಗ್ಗೆ ನನ್ನ ಮಿತ್ರರು ಮಾತನಾಡಿದ್ದಾರೆ. ನಾನೂ ಸಹ ಅವರ ಮಾತಿಗೆ ಬೆಂಬಲ ಕೊಡುತ್ತಾ, ವಿಶ್ವವಿದ್ಯಾನಿಲಯವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪನೆ ಮಾಡುವಲ್ಲಿ ಈ ಹಿಂದೆ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ, ಡಿವಿಜನ್ ವೈಸ್ ಕ್ಯಾಬಿನೆಟ್ ಮೀಟಿಂಗ್ ಮಾಡುವಾಗ, ನಮ್ಮ ಜಿಲ್ಲೆಯಲ್ಲೂ ಕ್ಯಾಬಿನೆಟ್ ಮೀಟಿಂಗ್ ಸೇರಿದಾಗ, ಸಾರ್ವಜನಿಕ ವೇದಿಕೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವ ಭರವಸೆಯನ್ನು ಕೊಟ್ಟಿದ್ದಾರೆ. ಬಹುಶಃ ಅವರೇ ಆಡಳಿತ ಪಕ್ಷದಲ್ಲಿದ್ದು ಮುಖ್ಯಮಂತ್ರಿಗಳಾಗಿದ್ದರೆ ಶಿವಮೊಗ್ಗ ಜಿಲ್ಲೆಗೆ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಕೊಡುತ್ತಿದ್ದರು. ನಾನು ನಮ್ಮ ಸರ್ಕಾರವನ್ನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಯಾರೇ ಮುಖ್ಯಮಂತ್ರಿಗಳಾಗಿರಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ದಿವಂಗತ ಟಿ. ಎ. ಪೈ ಅವರು ಲಕ್ಕವಳ್ಳಿಯ ಹತ್ತಿರ ಒಂದು ಸಾವಿರ ಎಕರೆ ಭೂಮಿಯನ್ನು ಸರ್ಕಾರ ಕೊಟ್ಟಿದ್ದೇ ಆದರೆ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುತ್ತೇನೆಂದು ಅವರು ಹೇಳಿದ ಮಾತನ್ನು ನಾನು ಕೇಳಿದ್ದೇನೆ. ಇವತ್ತು ನಮ್ಮ ಸ್ನೇಹಿತರು ಹೇಳಿದ ಹಾಗೆ, ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾಕೃತಿಕವಾಗಿ, ನೈಸರ್ಗಿಕವಾಗಿ ಇರತಕ್ಕ ಸಂಪತ್ತು ಪ್ರಪಂಚದಲ್ಲಿಯೇ ಎಲ್ಲೂ ಇಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಜೋಗದ ಜಲಪಾತ ನಮ್ಮ ಜಿಲ್ಲೆಯಲ್ಲಿದೆ, ಅದೇ ರೀತಿ ನಮ್ಮಲ್ಲಿ ಕುಳಜಾಪುರ ಬೆಟ್ಟವೆಂದು ಇದೆ, ಅದನ್ನು ಸಾರ್ವಜನಿಕ ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡಬೇಕು ಆ ಬೆಟ್ಟದ ತುತ್ತತುದಿಯಲ್ಲಿ ನಿಂತು ಕೊಂಡು ನೋಡಿದರೆ ಬಂಗಾಳಕೊಲ್ಲಿ ಕಾಣುತ್ತದೆ. ಅಂತಹ ಪ್ರಾಕೃತಿಕ ಸೌಂದರ್ಯ ನಮ್ಮ ಜಿಲ್ಲೆಯಲ್ಲಿದೆ. ಮಾನ್ಯ ಡಿ. ವಿ. ಅರಸುರವರ ವರದಿ ಪ್ರಕಾರ ಒಂದು ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದರೆ ೬೦ ಕಾಲೇಜುಗಳು ಇರಬೇಕೆನ್ನುವುದು ತಪ್ಪು ೩೦—೩೫ ಕಾಲೇಜುಗಳು ಇದ್ದರೆ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬಹುದೆಂದು ಅವರು ಒಂದು ಸಲಹೆ ಕೊಟ್ಟಿದ್ದಾರೆ. ಮಾನ್ಯ ಎ. ಆರ್. ಬದರಿನಾರಾಯಣ್‌ರವರೂ ಸಹ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಲಿಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲಾ ಅನುಕೂಲತೆಗಳು ಇವೆ, ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಕೊಠಾರಿ ಕಮಿಷನ್ ಪರಿಶೀಲನೆ ಮಾಡಿ ಅವರೂ ಸಹ ಸೂಕ್ತ ವರದಿ ಕೊಟ್ಟಿದ್ದಾರೆ. ಗುಲ್ಬರ್ಗ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳು ಯು. ಜಿ. ಸಿ. ಯವರ ಅನುಮತಿ ಇಲ್ಲದಿದ್ದರೂ ನಡೆಯುತ್ತಿವೆ. ಸರ್ಕಾರ ಯು. ಜಿ. ಸಿ. ಯವರು ಅನುಮತಿ ಕೊಡುವುದಿಲ್ಲವೆನ್ನುವ ಕಾರಣ ಹೇಳಬಹುದು, ೫೦ ಕೋಟಿ ರೂಪಾಯಿ ಬಂಡವಾಳ ಹಾಕಬೇಕು ಎನ್ನುವ ಕಾರಣ ಹೇಳಬಹುದು. ಈಗ ಮಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳು ಸರ್ಕಾರದ ವತಿಯಿಂದ ನಡೆಯುತ್ತಿದೆ. ಅದೇರೀತಿ ಶಿವಮೊಗ್ಗ ಜಿಲ್ಲೆಯಲ್ಲಿ ಸರ್ಕಾರ ಒಳ್ಳೆಯ ಮನಸ್ಸಿನಿಂದ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾವು ರಾಜಕೀಯವಾಗಿ ಬಹಳ ಹಿಂದುಳಿದಿದ್ದೇವೆ, ಆಗಿನ ಸರ್ಕಾರದವರು ಶಿವಮೊಗ ಜಿಲ್ಲೆಗೆ ಮೆಡಿಕಲ್ ಕಾಲೇಜ್ ಕೊಟ್ಟರು, ನಮ್ಮ ದುರ್ದೈವ ಅದು ಬೇರೆ ಜಿಲ್ಲೆಗೆ ಹೋಯಿತು. ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಮತ್ತು ತಾಂತ್ರಿಕ ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಎಲ್ಲಾ ಅನುಕೂಲತೆಗಳು ಇವೆ. ಸಾರ್ವಜನಿಕರೂ ಸಹ ಮುಂದೆ ಬಂದಿದ್ದಾರೆ. ಅದಕ್ಕೆ ಸರ್ಕಾರ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಲು ಸರ್ಕಾರ ಮನಸ್ಸು ಮಾಡಬೇಕೆಂದು ಹೇಳಿ, ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಲು ಮಾನ್ಯ ಎಲ್. ಟಿ. ತಿಮ್ಮಪ್ಪ ಹೆಗಡೆಯವರು ತಂದಿರತಕ್ಕ ಖಾಸಗಿ ನಿರ್ಣಯವನ್ನು ಬೆಂಬಲಿಸುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಲ್. ಟಿ ತಿಮ್ಮಪ್ಪ ಹೆಗಡೆಯವರು ತಂದಿರತಕ್ಕ ಖಾಸಗಿ ನಿರ್ಣಯಕ್ಕೆ ನಾನು ಬೆಂಬಲ ಕೊಡುತ್ತಾ, ಶಿವಮೊಗ್ಗ ಜಿಲ್ಲೆಯಲ್ಲಿ ಅದರಲ್ಲೂ ಲಕ್ಕವಳ್ಳಿಯ ಹತ್ತಿರ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಹಲವಾರು ವರ್ಷಗಳಿಂದ ಕಂಡಿರತಕ್ಕ ಕನಸನ್ನು ನನಸನ್ನಾಗಿ ನೆರವೇರಿಸಿಕೊಡುತ್ತೀರಿ ಎಂದ

ನಾನು ನಂಬಿದ್ದೇನೆ. ಕಳೆದ ಮೂರ್ನಾಲ್ಕು ದಶಕಗಳಿಂದ ಮುಖ್ಯಮಂತ್ರಿಗಳು ಮಂತ್ರಿಗಳು ಅಲ್ಲಿಗೆ ಬಂದಾಗ ಭರವಸೆಯನ್ನು ಕೊಡುತ್ತಾ ಬಂದಿದ್ದಾರೆ. ಮಾನ್ಯ ಬಸವನಗೌಡರು ಹೇಳಿದ ಹಾಗೆ, ಹಿಂದಿನ ಸರ್ಕಾರ ನಮ್ಮ ಜಿಲ್ಲೆಯಲ್ಲಿ ಸಚಿವ ಸಂಪುಟದ ಸಭೆಯನ್ನು ನಡೆಸಿದಾಗ ಭರವಸೆಯನ್ನು ಕೊಟ್ಟಿದ್ದಾರೆ. ಹೀಗೆ ಹಲವಾರು ಭರವಸೆಗಳನ್ನು ಕೊಟ್ಟರೂ ಕೂಡ ಭರವಸೆಗಳು ಭರವಸೆಗಳಾಗಿಯೇ ಉಳಿದು ಕೊಂಡಿವೆ. ಅದೇರೀತಿ ಹಿಂದಿನ ಸರ್ಕಾರ ಕೊಟ್ಟ ಭರವಸೆ ಸಹ ಭರವಸೆಯಾಗಿಯೇ ಉಳಿದು ಕೊಂಡಿದೆ. ನಮಗೆ ಆ ಒಂದು ಆಸೆಯೇ ಇಲ್ಲದೇ ಇರುವ ಹಾಗೆ ಆಗಿದೆ. ಮಾನ್ಯ ಯಡಿಯೂರಪ್ಪ ನವರು ಮತ್ತು ಆನಂದರಾಯರು ಹೇಳಿದಂತಹ ವಿಷಯಗಳು ಪೂರ್ತಿ ಸತ್ಯವಾದ ವಿಷಯಗಳು. ಈ ಒಂದು ವಿಶ್ವವಿದ್ಯಾನಿಲಯವನ್ನು ಮಾಡಿದರೆ ಅದು ಪ್ರಪಂಚದಲ್ಲಿಯೇ ಅತ್ಯುತ್ತಮವಾದ ವಿಶ್ವವಿದ್ಯಾ ನಿಲಯವಾಗುತ್ತದೆ ವಿಶ್ವವಿದ್ಯಾನಿಲಯ ಮಾಡಲಿಕ್ಕೆ ಸುಂದರವಾದ ಸ್ಥಳ, ಸನ್ನಿವೇಶ ಎಲ್ಲಾ ಕೂಡ ಚೆನ್ನಾಗಿದೆ. ಇಂತಹ ಎಲ್ಲಾ ಅನುಕೂಲತೆಗಳು ಇರುವಾಗ ಅಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವುದು ಸೂಕ್ತವೆಂದು ಹೇಳಿ, ಶಿವಮೊಗ್ಗ ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದಂತಹ ಕೀರ್ತಿ ನಮಗೆಲ್ಲರಿಗೂ ಬರುತ್ತದೆ, ಈ ಸಾರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಂಡು, ಸಮಯದ ಅಭಾವವಿರುವುದರಿಂದ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ತಿಪ್ಪಯ್ಯ.—(ಮೂಡಿಗೆರೆ) ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮತ್ತು ಇತರ ಸ್ನೇಹಿತರು ಶಿವಮೊಗ್ಗ ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಕೇಳುವುದರಲ್ಲಿ ನಮ್ಮದು ಸ್ವಾರ್ಥವಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಲಕ್ಕವಳ್ಳಿ ಡ್ಯಾಮ್ ಕಟ್ಟುವಾಗ ನಮ್ಮ ಜಿಲ್ಲೆಯ ಬಹು ಭಾಗ ಮುಳುಗಡೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯ ಇರತಕ್ಕದ್ದು ನ್ಯಾಯಯುತವಾಗಿದ್ದರೂ ಚಿಕ್ಕಮಂಗಳೂರು ಜಿಲ್ಲೆಗೆ ಯಾವ ರೀತಿಯ ಪ್ರಯೋಜನವಾಗಿಲ್ಲ. ಕಾರಣ ಇಷ್ಟೆ, ನಮ್ಮ ಜಿಲ್ಲೆಯಿಂದ ಕಾಫಿ, ಟೀ, ಏಲಕ್ಕಿಯನ್ನು ಹೊರ ದೇಶಗಳಿಗೆ ಕಳುಹಿಸಿ ಡಾಲರುಗಳ ರೂಪದಲ್ಲಿ ಹಣ ಬರುವುದರಿಂದ ನಮ್ಮ ಜಿಲ್ಲೆ ಯಾರ ಕಣ್ಣಿಗೂ ಕಾಣುತ್ತಿಲ್ಲ. ಲಕ್ಕವಳ್ಳಿಯಲ್ಲಿ ಪಿ. ಜಿ. ಸೆಂಟರ್ ಮಾಡಿದ್ದಾರೆ. ಇನ್ನಿತರ ಕೇಂದ್ರಗಳು ಬರುತ್ತಿವೆ, ಅಲ್ಲಿಗೆ ಯಾವುದೇ ಯೋಜನೆಯನ್ನು ಹಾಕಿದರೂ ನಮಗೂ ಅನುಕೂಲವಾಗುತ್ತದೆ. ಕೇಂದ್ರ ಟ್ರೈನಿಂಗ್ ಸೆಂಟರ್ ಇದೆ. ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳು ಅಕ್ಕಪಕ್ಕದಲ್ಲಿರುವುದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ವಿಶ್ವ ವಿದ್ಯಾನಿಲಯ ಮಾಡಲಿಕ್ಕೆ ನಮ್ಮ ಪೂರ್ಣ ಬೆಂಬಲವಿದೆ. ಹಿಂದಿನ ಸರ್ಕಾರಗಳು ಮಾಡುತ್ತೇವೆಂದು ಭರವಸೆಯನ್ನು ಕೊಟ್ಟಿದ್ದರೂ ಆ ಸರ್ಕಾರಗಳು ಮಾಡಲಿಲ್ಲ. ಆದ್ದರಿಂದ ನಮ್ಮ ಸರ್ಕಾರ ಶಿವಮೊಗ್ಗ ಜಿಲ್ಲೆಯ ಲಕ್ಕವಳ್ಳಿಯಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಮಾಡಿ ಮಲೆನಾಡಿನ ಹಿಂದುಳಿದ ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಲಭ್ಯಗಳು ಸಿಗುವಂತೆ ಮಾಡಿ. ಅಲ್ಲಿ ವಿಶ್ವವಿದ್ಯಾನಿಲಯ ಮಾಡಿದಂತಹ ಕೀರ್ತಿ ನಮ್ಮ ಸರ್ಕಾರಕ್ಕೆ ಬರಲಿ ಎಂದು ಆಶಿಸಿ, ನನಗೆ ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—(ಬೀರೂರು) ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಅನೇಕ ಜನ ಸ್ನೇಹಿತರು ಬಹಳ ಗೌರವಯುತವಾಗಿ ನಮ್ಮ ಸರ್ಕಾರವನ್ನು ಶ್ಲಾಘಿಸಿದ್ದಾರೆ. ಅದಕ್ಕೆ ನಾನು ಮೊಟ್ಟ ಮೊದಲನೆಯದಾಗಿ ಅಭಿನಂದಿಸುತ್ತೇನೆ. ಕಾರಣ ಇಷ್ಟೇ, ಯಾವಾಗಲೂ ಒಳ್ಳೆಯದನ್ನು ಒಳ್ಳೆಯದು ಎಂದು ಹೇಳಬೇಕು, ಕೆಟ್ಟದ್ದನ್ನು ಕೆಟ್ಟದು ಎಂದು ಹೇಳಬೇಕು. ಸಹ್ಯಾದ್ರಿ ವಿಶ್ವವಿದ್ಯಾನಿಲಯಬೇಕು ಎಂದು ಕೇಳಿರುವ ವಿಚಾರ ಶ್ಲಾಘನೀಯವಾದ ವಿಚಾರ. ಇಡೀ ಮಲೆನಾಡು ಸಂಪತ್ತಿನಿಂದ ಕೋಟ್ಯಾಂತರ ರೂಪಾಯಿ ರಾಜ್ಯ ಸರ್ಕಾರಕ್ಕೆ ಬರತಕ್ಕದ್ದು, ಇದೆ. ಅದರ ಬಗ್ಗೆ ಸರ್ಕಾರ ಅರಿತಿದೆ. ಏನಾದರೂ ಇರಲಿ, ಈ ದಿಸೆಯಲ್ಲಿ ಹಿಂದಿನ ಸರ್ಕಾರ ಶಿವಮೊಗ್ಗದಲ್ಲಿ ಹೋಗಿ ದೊಡ್ಡ ಅಂದೋಲನ ಮಾಡಿ ದೊಡ್ಡ ದೊಡ್ಡ ಸಭೆಗಳನ್ನು ಏರ್ಪಡಿಸಿ ನಿಮಗೆ ಅದು ಕೊಡುತ್ತೇವೆ, ಇದು ಕೊಡುತ್ತೇವೆ, ಯೂನಿವರ್ಸಿಟಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟು ಅದು ಫಲಕಾರಿಯಾಗಲಿಲ್ಲ. ಈ ದಿಸೆಯಲ್ಲಿ ನಮ್ಮ ರಾಜ್ಯ ಸರ್ಕಾರದವರು ನಮ್ಮ ರಾಜ್ಯದ ಮುಖ್ಯಮಂತ್ರಿಯವರು ಈ ಮಹತ್ ಕಾರ್ಯವನ್ನು ಮಾಡಿ ನಮ್ಮ ರಾಜ್ಯ ಸರ್ಕಾರಕ್ಕೆ ಒಳ್ಳೆಯ ಕೀರ್ತಿ ಬರುವಂತೆ ಮಾಡಬೇಕು. ಎಲ್ಲಾ ಕಡೆಗಳಲ್ಲೂ ಯೂನಿವರ್ಸಿಟಿಗಳನ್ನು ಸ್ಥಾಪನೆ ಮಾಡಿದ್ದಾರೆ. ಇದು ಬಹಳ ಪ್ರಮುಖವಾದ ಜಾಗ, ಅಲ್ಲಿಂದ ಕೋಟ್ಯಾಂತರ ರೂಪಾಯಿ ಉತ್ಪತ್ತಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುತ್ತಿದೆ. ಆದ್ದರಿಂದ, ನಮ್ಮ ಸರ್ಕಾರ ದಿಟ್ಟ ಹೆಜ್ಜೆಯನ್ನು ಇಟ್ಟು

ಒಂದು ವಿಶ್ವವಿದ್ಯಾನಿಲಯವನ್ನು ಲಕ್ಕವಳ್ಳಿಯಲ್ಲಿ ಸ್ಥಾಪನೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಯಡಿಯೂರಪ್ಪನವರು ಹೇಳಿದ ವಿಚಾರವನ್ನು ಸಮರ್ಥನೆ ಮಾಡುತ್ತಾ, ನಮ್ಮ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ, ಇದನ್ನು ಮಾಡಿಕೊಡಬೇಕೆಂದು ಹೇಳುತ್ತಾ, ಈ ಸಂದರ್ಭದಲ್ಲಿ ಮಾತ ನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಮಾನ್ಯ ಸಭಾಧ್ಯಕ್ಷರೇ, ಖಾಸಗಿ ನಿರ್ಣಯವನ್ನು ಮಾನ್ಯ ತಿಮ್ಮಪ್ಪ ಹೆಗ್ಗಡೆಯವರು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಇದೇ ಶೈಕ್ಷಣಿಕ ವರ್ಷದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯ ವನ್ನು ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡತಕ್ಕ ನಿರ್ಣಯವನ್ನು ಸಭೆಯ ಮುಂದೆ ತಂದಿದ್ದಾರೆ. ಮಾನ್ಯ ತಿಮ್ಮಪ್ಪ ಹೆಗ್ಗಡೆಯವರು ಸಭೆಯಲ್ಲಿ ಇಲ್ಲ. ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ಸದಸ್ಯರು ಸದುದ್ದೇಶವನ್ನು ಇಟ್ಟುಕೊಂಡಿದ್ದಾರೆ ಎಂದು ನನ್ನ ಭಾವನೆ. ಈ ಉದ್ದೇಶ ಸಫಲವಾಗತಕ್ಕಂಥ ಕಾಲ ನಿರ್ಧಾರ ಮಾಡಬೇಕಾಗಿದೆ. ಎಲ್ಲವೂ ಕಾಲ ಮಹಿಮೆಯನ್ನು ಅನುಸರಿಸಿ ಹೋಗಬೇಕಾದ ವಿಷಯಗಳು ಇವೆ. ಕಾಲಾಯತಸ್ಮೈನಮಃ ಎಂಬ ನಾಣ್ಣುಡಿ ಇದೆ ೧೦–೧೨ ವರ್ಷಗಳಿಂದಲೂ ಈ ಬೇಡಿಕೆ ಬಗ್ಗೆ, ಇಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡತಕ್ಕದ್ದರ ಸಾಧ್ಯಾಸಾಧ್ಯತೆಗಳ ಬಗ್ಗೆ ಚರ್ಚೆ ನಡೆದಿದೆ, ಚಿಂತನೆ ನಡೆದಿದೆ. ೧೯೭೨ರಲ್ಲಿ ಅಂದಿನ ವಿದ್ಯಾಮಂತ್ರಿಗಳಾದ ಶ್ರೀಮಾನ್ ಬದ್ರಿನಾರಾಯಣ್ ಅವರ ಅಧ್ಯಕ್ಷತೆ ಯಲ್ಲಿ ಸಮಿತಿ ಮಾಡಿದಾಗ ಗುಲ್ಬರ್ಗ, ಮಂಗಳೂರು, ಶಿವಮೊಗ್ಗ ವಿಶ್ವವಿದ್ಯಾನಿಲಯಗಳನ್ನು ಆರಂಭಿ ಸಲು ಅದು ಶಿಫಾರಸ್ಸು ಮಾಡಿತ್ತು. ಆದರೆ ಆರ್ಥಿಕ ಕಾರಣಗಳಿಂದ ಆ ಶಿಫಾರಸ್ಸು ಅಲ್ಲಿಗೇ ನಿಂತು ಶಿಫಾರಸ್ಸಾಗಿ ಉಳಿದಿದೆ. ಇದು ಆದನಂತರ ೧೯೭೯–೮೦ರಲ್ಲಿ ಏಕ ಸದಸ್ಯ ಆಯೋಗದ ಡಾ॥ ಡಿ. ವಿ. ಅರಸ್‌ರವರು ಶಿವಮೊಗ್ಗ ಜಿಲ್ಲೆಯ ಭದ್ರಾ ಯೋಜನೆಯ ಪ್ರದೇಶದಲ್ಲಿ ಈಗಿರುವ ಸ್ನಾತಕೋತ್ತರ ಕೇಂದ್ರವನ್ನು ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸುವ ಸಾಧ್ಯತೆಯ ಬಗ್ಗೆ ಸೂಚನೆ ಮಾಡಿದ್ದರು, ಅದು ಅಲ್ಲಿಗೆ ನಿಂತಿದೆ. ೧೯೮೧–೮೨ರಲ್ಲಿ ಹಿಂದಿನ ಸಚಿವ ಸಂಪುಟ ಅನೌಪಚಾರಿಕವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂಬ ಬಗ್ಗೆ ನಿರ್ಣಯ ತೆಗೆದುಕೊಂಡಿತ್ತು. ಆದರೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗಕ್ಕೆ ಸರ್ಕಾರ ಹಣ ಕೋರಿ ಇನ್ನೂ ಬರೆದಿಲ್ಲ. ಇನ್ನೂ ತಮ್ಮ ಬೇಡಿಕೆಯನ್ನು ಸಲ್ಲಿಸಿಲ್ಲ. ಈ ನಿಯೋಜಿತ ವಿಶ್ವವಿದ್ಯಾನಿಲಯಕ್ಕೆ ಮೂರು ಜಿಲ್ಲೆಗಳ ೩೪ ಕಾಲೇಜುಗಳು ಸೇರಿಕೊಳ್ಳುತ್ತವೆ. ಸುಮಾರು ವಾರ್ಷಿಕ ವೆಚ್ಚ ೨ ಕೋಟಿ ರೂಪಾಯಿ ಆಗುತ್ತದೆ. ಇದು ಹಿಂದಿನ ಅಂದಾಜು. ಈಗಿನ ಅಂದಾಜು ಪ್ರಕಾರ ಜಾಸ್ತಿಯಾಗಬಹುದು. ಅಭಿವೃದ್ಧಿ ಕಾರ್ಯಗಳಿಗಾಗಿ ಮೊದಲ ೧೦ ವರ್ಷಗಳಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳು ಬೇಕಾಗಬಹುದು. ಈಗ ಹೊಸದಾಗಿ ಸ್ಥಾಪನೆ ಮಾಡಿರತಕ್ಕ ಗುಲ್ಬರ್ಗ, ಮಂಗಳೂರು ವಿಶ್ವವಿದ್ಯಾನಿಲಯಗಳ ಅವಶ್ಯಕತೆಗಳನ್ನು ಪೂರ್ಣವಾಗಿ ಪೂರೈಸಲು ಇನ್ನೂ ಸಾಧ್ಯವಾಗಲಿಲ್ಲ. ಈಗ ಸ್ಥಾಪಿತವಾಗಿರತಕ್ಕ ವಿಶ್ವವಿದ್ಯಾನಿಲಯಗಳನ್ನು ಪೂರ್ಣ ವಾಗಿ ನಡೆಸತಕ್ಕ ಸೌಲಭ್ಯಗಳನ್ನು ಕೊಡತಕ್ಕಂಥ ಜವಾಬ್ದಾರಿ ಪೂರೈಸಿ ಅವು ಅಸ್ತಿತ್ವಕ್ಕೆ ಬಂದಮೇಲೆ ತಮ್ಮ ಗುರಿಯನ್ನು ಸಾಧಿಸತಕ್ಕ ದಿಸೆಯಲ್ಲಿ ಕೆಲಸಮಾಡತಕ್ಕ ವ್ಯವಸ್ಥೆಯನ್ನು ಇನ್ನೂ ಪೂರ್ಣವಾಗಿ ಮಾಡುವುದಕ್ಕೆ ಆಗಿಲ್ಲ. ಹಣದ ಕೊರತೆಯಿಂದಾಗಿ ಅದು ಸಾಧ್ಯವಾಗಿಲ್ಲ. ಭಾರತ ಸರ್ಕಾರದವರನ್ನು ಹಣ ಕೇಳಿದಾಗ ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಎಂದರೆ ಈಗಿರುವ ವಿಶ್ವವಿದ್ಯಾನಿಲಯಗಳಲ್ಲಿ ಗುಣಮಟ್ಟ ಮತ್ತು ಸೌಲಭ್ಯಗಳನ್ನು ವಿಸ್ತರಿಸುವುದು ಮುಖ್ಯ ಎಂದು ಸೂಚಿಸಿದ್ದಾರೆ. ಮೂರು ವರ್ಷ ಗುಲ್ಬರ್ಗ, ಮಂಗಳೂರು ವಿಶ್ವವಿದ್ಯಾನಿಲಯಗಳ ಕೆಲಸಕಾರ್ಯ ನಡೆಸಿದ ನಂತರ ಕೇಂದ್ರ ಸರ್ಕಾರದ ಆರ್ಥಿಕ ಆಯೋಗದಿಂದ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ಹಣ ಬರತಕ್ಕ ಸಾಧ್ಯತೆಗಳು ಈಗ ಇನ್ನೂ ಕಂಡುಬರುತ್ತಿದೆ, ಇನ್ನೂ ಬರಬೇಕು. ಶಿವಮೊಗ್ಗ ಜಿಲ್ಲೆಯಲ್ಲಿ ಈ ವಿಶ್ವವಿದ್ಯಾನಿಲಯ ವನ್ನು ಸ್ಥಾಪನೆ ಮಾಡಿದರೆ ಭಾರತ ಸರ್ಕಾರದಿಂದ ದೊರಕತಕ್ಕ ಧನಸಹಾಯ ಸುಮಾರು ೧೮ ಲಕ್ಷ ರೂಪಾಯಿ ಬರುತ್ತದೆಂದು ಒಂದು ಅಂದಾಜು ಇದೆ. ರಾಜ್ಯ ಸರ್ಕಾರದವರು ಈ ಹೊಸ ವಿಶ್ವವಿದ್ಯಾ ನಿಲಯಕ್ಕೆ ೨ ಕೋಟಿ ರೂಪಾಯಿಗೆ ಮೇಲೆ ಸ್ಥಿರ ಆಸ್ತಿ ಮಾಡಿದ ಮೇಲೆ ವಿಶ್ವವಿದ್ಯಾನಿಲಯದ ಅನುದಾನ ಆಯೋಗದ ನೆರವಿಗೆ ಅರ್ಹತೆ ಪಡೆಯುತ್ತದೆ. ನೇರವಾಗಿ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನಿಂದ ಬರುವುದಿಲ್ಲ. ಮೊದಲು ನಾವು ಅಸೆಟ್ ಕ್ರಿಯೇಟ್ ಮಾಡಬೇಕು, ಬಿಲ್ಡಿಂಗ್ಸ್, ಲ್ಯಾಬೊರೇಟರಿ ಇತ್ಯಾದಿಗಳನ್ನು ಮಾಡಬೇಕು. ಅಲ್ಲಿ ಅಸ್ತಿತ್ವಕ್ಕೆ ತಂದಮೇಲೆ ೨ ಕೋಟಿ ರೂಪಾಯಿಗಳ ಈ ಸೌಲಭ್ಯ ಗಳನ್ನು ಕಲ್ಪಿಸಿದ ಮೇಲೆ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ಗೆ ಅರ್ಜಿ ಸಲ್ಲಿಸತಕ್ಕ ಮನ್ನಣೆ ಪಡೆಯು

ತ್ತೇವೆ. ಇಷ್ಟನ್ನು ಮಾಡಲಿಕ್ಕೆ ಆರ್ಥಿಕ ಮುಗ್ಗಟ್ಟು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಈ ವಿಚಾರವನ್ನು ಮಾನ್ಯ ಸದಸ್ಯರು ಮರೆಯಬಾರದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಹಲವಾರು ವರ್ಷಗಳಿಂದ ಈ ವಿದ್ಯಾ ಇಲಾಖೆಗೆ ಖರ್ಚು ಮಾಡತಕ್ಕ ಹಣದ ಗತಿ ನೋಡೋಣ. ಡೈರೆಕ್ಟೀವ್ ಪ್ರಿನ್ಸಿಪಲ್ ಆಫ್ ಸ್ಟೇಟ್ ಪಾಲಿಸಿ ಪ್ರಕಾರ ೧೪ ವರ್ಷ ವಯಸ್ಸಿನ ಎಲ್ಲರಿಗೂ ಕೂಡ ವಿದ್ಯಾಭ್ಯಾಸದ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂಬ ನಿರ್ದೇಶನವಿದ್ದರೂ ಕೂಡ ಆ ನಿರ್ದೇಶನ ಪೂರೈಸುವುದರಲ್ಲಿ ಬಹಳ ಹಿಂದುಳಿದಿದ್ದೇವೆ. ಅದನ್ನು ಮಾಡಲಿಕ್ಕೆ ಕಾರಣಾಂತರಗಳಿಂದ ಆಗಲಿಲ್ಲ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಮಟ್ಟದಲ್ಲಿ ಹಣ ಅಲ್ಲಿ ಜಾಸ್ತಿ ಖರ್ಚು ಆಗಬೇಕಾಗುತ್ತದೆ. ಆ ಪ್ರಮಾಣದ ಹಣ ಅಲ್ಲಿ ಜಾಸ್ತಿ ಖರ್ಚಾಗಿದೆ. ಇನ್ನು ಹೈಯರ್ ಎಜುಕೇಷನ್‌ಗೆ ಹೆಚ್ಚು ಹಣ ಈಚಿನ ವರ್ಷಗಳಲ್ಲಿ ಖರ್ಚಾಗುತ್ತಿದೆ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ೧೯೮೫–೮೬ನೇ ಇಸವಿಯ ಆಯವ್ಯಯಪಟ್ಟಿಯ ಪ್ರಕಾರ ೨೬೧ ಕೋಟಿ ರೂಪಾಯಿಗಿಂತಲೂ ಹೆಚ್ಚಿಗೆ ವಿದ್ಯಾ ಇಲಾಖೆಗೆ ಹಣ ಖರ್ಚು ಮಾಡುತ್ತಿದ್ದೇವೆ. ಸರ್ಕಾರದ ಒಟ್ಟು ಆದಾಯ ೧,೫೦೦ ಕೋಟಿ ರೂಪಾಯಿಗಳು. ಇದರಲ್ಲಿ ೨೬೧ ಕೋಟಿ ರೂಪಾಯಿಗಿಂತಲೂ ಹೆಚ್ಚಿಗೆ ಹಣವನ್ನು ವಿದ್ಯಾ ಇಲಾಖೆಗೆ ಈಗಾಗಲೇ ಖರ್ಚು ಮಾಡುತ್ತಿದ್ದೇವೆ. ಒಂದು ಹೊಸ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದರೆ ೨ ಕೋಟಿ ರೂಪಾಯಿಯಷ್ಟು ಅಸೆಟ್ಸ್ ನಾವು ಅಲ್ಲಿ ಕ್ರಿಯೇಟ್ ಮಾಡಬೇಕು. ಅನಂತರ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ಗೆ ಅರ್ಜಿ ಹಾಕಬೇಕು. ಇದು ಆದನಂತರ ವರ್ಷಕ್ಕೆ ೨ ಕೋಟಿ ರೂಪಾಯಿ ಹಣ ಖರ್ಚು ಮಾಡತಕ್ಕಂಥ ಆರ್ಥಿಕ ಸೌಕರ್ಯ, ೧೫ ಕೋಟಿ ರೂಪಾಯಿ ಹಣ ಖರ್ಚು ಮಾಡುವ ಶಕ್ತಿ ಸರ್ಕಾರಕ್ಕೆ ಇರಬೇಕು ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಆ ಪರಿಸ್ಥಿತಿಯಲ್ಲಿ ನಾವು ಇದ್ದೇವೆಯೇ ಎನ್ನುವುದನ್ನು ಮಾನ್ಯ ಸ್ನೇಹಿತರು, ಈ ನಿರ್ಣಯದ ಪರವಾಗಿ ಮಾತನಾಡಿದ ಮಾನ್ಯ ಸದಸ್ಯರು ಯೋಚಿಸಬೇಕೆಂದು ನಾನು ಭಾವಿಸುತ್ತೇನೆ.

ಮಾನ್ಯ ಸದಸ್ಯರುಗಳಾದ ಯಡಿಯೂರಪ್ಪನವರು ಸ್ವಾಮಿರಾವ್‌ರವರು, ಬಸವನಗೌಡರು ತಿಮ್ಮಪ್ಪ ಹೆಗಡೆಯವರು, ಲಕ್ಷ್ಮಯ್ಯನವರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ಇನ್ನಿಬ್ಬರು ಮಾನ್ಯ ಸದಸ್ಯರುಗಳು ಯಾರಿದ್ದಾರೆ ಇವರಿಗೆ ಶಿವಮೊಗ್ಗದಲ್ಲಿ ಒಂದು ವಿಶ್ವವಿದ್ಯಾನಿಲಯವಾಗಬೇಕೆಂಬ ಬಯಕೆ ಇದೆ, ಕಳಕಳಿ ಇದೆ. ಇದರ ಬಗ್ಗೆ ಯಾವುದೇ ವಿವಾದವಿಲ್ಲ. ಆದರೆ ನಮ್ಮ ರಾಜ್ಯಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ನಾವು ಗಮನದಲ್ಲಿಟ್ಟುಕೊಂಡು ಇದಕ್ಕೆ ಕೈ ಹಾಕಬೇಕಾಗಿದೆ. ಆದ್ದರಿಂದ ನಾನು ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಬೇಕೆಂಬ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದಕ್ಕೆ ಇರತಕ್ಕ ಆಧಾರ ಅಂಕಿಅಂಶಗಳು ಏನು, ಇವುಗಳ ಗುಣಮಟ್ಟ ಏನಿರಬೇಕು ಮತ್ತು ಇಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಿಕ್ಕಬೇಕಾದ ಸೌಕರ್ಯ ಸೌಲಭ್ಯಗಳು ಯಾವ ಪ್ರಮಾಣದಲ್ಲಿರಬೇಕು, ಈ ಕಾಲೇಜುಗಳಿಂದ ಹೊರಗೆ ಬರತಕ್ಕ ವಿದ್ಯಾರ್ಥಿಗಳ ವಿದ್ಯೆಯ ಮಟ್ಟ ಹೇಗಿರಬೇಕೆಂಬುದನ್ನು ಯೋಚನೆ ಮಾಡುವುದು ಬಹಳ ಮುಖ್ಯ. ಮಕ್ಕಳಿಗೆ ೧೪ನೇ ವರ್ಷದವರೆಗೂ ಕಡ್ಡಾಯ ಶಿಕ್ಷಣವನ್ನು ಕೊಡುತ್ತೇವೆಂದು ಹೇಳಿ ೩೫ ವರ್ಷಗಳು ಕಳೆದರೂ ಇನ್ನೂ ಅದನ್ನು ಕಾರ್ಯತಃ ಮಾಡುವುದಕ್ಕೆ ಆಗಿಲ್ಲ. ಇದು ಎಲ್ಲರ ಉದ್ದೇಶವಾದರೂ ಏತಕ್ಕೆ ಮಾಡಲು ಸಾಧ್ಯವಾಗಲಿಲ್ಲ ಎಂದರೆ, ಇದಕ್ಕೆ ಬೇಕಾದ ಹಣದ ಸಹಾಯ ಎಲ್ಲಿಂದ ಬರಬೇಕು ? ಕೇಂದ್ರ ಸರ್ಕಾರದವರು ಕೊಡುತ್ತಾರೆ ನಿಜ. ಆದರೆ ಎಷ್ಟು ಕೊಡುತ್ತಾರೆ? ಹೆಚ್ಚು ಭಾಗ ಹಣವನ್ನು ನಮ್ಮ ರಾಜ್ಯ ಸರ್ಕಾರದಿಂದಲೇ ಹೊಂದಿಸಿಕೊಳ್ಳಬೇಕು. ಇದು ಈಗಿನ ಪರಿಸ್ಥಿತಿಯಲ್ಲಿ ರಾಜ್ಯಸರ್ಕಾರಕ್ಕೆ ಸಾಧ್ಯವೆ ಎಂಬುದನ್ನು ತಾವು ಯೋಜನೆ ಮಾಡಬೇಕು. ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದೇನೋ ಸರಿ. ಆದರೆ ಎಷ್ಟು ಸ್ಥಾಪಿಸಬೇಕು ? ಹೇಗೆ ಮಾಡಬೇಕೆಂಬುದು ಮುಖ್ಯ. ಈಗಾಗಲೇ ಸಂಸ್ಕೃತ ವಿಶ್ವವಿದ್ಯಾನಿಲಯ ಬೇಕೆಂಬ ಬೇಡಿಕೆ ಇದೆ, ಹೆಲ್ತ್ ಯೂನಿವರ್ಸಿಟಿ ಬೇಕೆಂಬ ಬೇಡಿಕೆ ಇದೆ. ಅದೇರೀತಿ ಬೆಂಗಳೂರಿನಲ್ಲಿ ಟೆಕ್ನಾಲಾಜಿಕಲ್ ಯೂನಿವರ್ಸಿಟಿ ಮಾಡಬೇಕೆಂಬ ಬೇಡಿಕೆ ಇದೆ. ಪ್ರತ್ಯೇಕವಾದ ಮಹಿಳಾ ಯೂನಿವರ್ಸಿಟಿ ಮಾಡಬೇಕೆಂಬ ಬೇಡಿಕೆ ಕೂಡ ಇದೆ. ಕೇವಲ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದರಿಂದಲೇ ಅಲ್ಲಿ ಸಿಕ್ಕತಕ್ಕ ವಿದ್ಯೆಯ ಮಟ್ಟ

ಉಪಾಧ್ಯಾಯರ ಮಟ್ಟ ಜಾಸ್ತಿಯಾಗುತ್ತದೆಂದು ನನಗನಿಸುವುದಿಲ್ಲ. ಏಕೆಂದರೆ ನಾನು ಕೂಡ ಸ್ವಲ್ಪ ಕಾಲ ಅಂದರೆ ಸುಮಾರು ೨೦ ವರ್ಷಕಾಲ ಉಪಾಧ್ಯಾಯನಾಗಿ ಕೆಲಸ ಮಾಡಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಹಾಗಾದರೆ ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳಬೇಕು. ಏಕೆಂದರೆ, ೨೦ ವರ್ಷಕಾಲ ಅಂದರೆ ಅದೇನೂ ಕಡಿಮೆ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಕಡಿಮೆ ಎಂದೇ ಅನಿಸುತ್ತದೆ. ಏಕೆಂದರೆ ವಿದ್ಯೆ ಎಂಬುದು ಸಮುದ್ರವಿದ್ದಂತೆ, ಬ್ರಹ್ಮಾಂಡ ಇದ್ದಹಾಗೆ, ಓದುವುದು ಬಹಳಷ್ಟು ಇದೆ. ಹಿಂದಿನ ಕಾಲದಲ್ಲಿ ಗುರುಕುಲಾಶ್ರಮ ಇದ್ದಾಗ ವಿದ್ಯಾಭ್ಯಾಸದ ಮಟ್ಟ ಯಾವರೀತಿ ಇತ್ತು ಎನ್ನುವುದರ ಬಗ್ಗೆ ನಾನು ನಳಂದ, ತಕ್ಷಶಿಲ ಮುಂತಾದ್ದನ್ನು ಚರಿತ್ರೆಯಲ್ಲಿ ಓದಿ ತಿಳಿದುಕೊಂಡಿದ್ದೇನೆ. ಆದ್ದರಿಂದ ಇವತ್ತು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಕರ ಎಫಿಷಿಯನ್ಸಿ ಮತ್ತು ಶಿಕ್ಷಣದ ಮಟ್ಟವನ್ನು ಉತ್ತಮಪಡಿಸುವ ಕಡೆ ಗಮನಕೊಡಬೇಕು. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣದ ಕಡೆ ಹೆಚ್ಚಿನ ಗಮನವನ್ನು ಕೊಡಬೇಕಾದ್ದು ನಮ್ಮ ನಿಮ್ಮೆಲ್ಲರ ಕರ್ತವ್ಯ, ಸರ್ಕಾರದ ಆದ್ಯ ಕರ್ತವ್ಯ. ಆದರೆ ಇವತ್ತಿನ ಸ್ಥಿತಿಗೆ ನಾವೆಲ್ಲರೂ ಕಾರಣರಾಗಿದ್ದೇವೆ. ಈ ಸಂದರ್ಭದಲ್ಲಿ ಸಹ್ಯಾದ್ರಿ ಯೂನಿವರ್ಸಿಟಿಯನ್ನು ಶಿವಮೊಗ್ಗದಲ್ಲಿ ಸ್ಥಾಪಿಸಲು ಆರ್ಥಿಕ ದೃಷ್ಟಿಯಿಂದ ಸಾಧ್ಯವಾಗಲಾರದೆಂದು ಈ ಸಭೆಯ ಮಾನ್ಯ ಸದಸ್ಯರಿಗೆ ಅದರಲ್ಲೂ ಮುಖ್ಯವಾಗಿ ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ತಿಮ್ಮಪ್ಪಹೆಗಡೆಯವರಿಗೆ ಮತ್ತು ನಿನ್ನೆಯ ದಿವಸ ಈ ನಿರ್ಣಯದ ಮೇಲೆ ಮಾತನಾಡಿ ಕಳಕಳಿಯನ್ನು ತೋರಿಸಿದ ಎಲ್ಲ ಮಾನ್ಯ ಸದಸ್ಯರಿಗೂ ನಾನು ಬಹಳ ವಿನಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಆದರೆ ಇನ್ನುಮುಂದೆ ಹೊಸದಾಗಿ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವಾಗ ಶಿವಮೊಗ್ಗಾದ ಯೂನಿವರ್ಸಿಟಿಗೆ ಆದ್ಯತೆಯನ್ನು ನೀಡಲಾಗುವುದು. When a decision is going to be taken for the establishment of a University, priority will be given in the case of Shimoga Man is mortal, but the world goes on. ನನ್ನೊಬ್ಬನಿಂದಲೇ ಈ ಪ್ರಪಂಚದ ವ್ಯವಹಾರ ಉಳಿದಿಲ್ಲ. ಕಾಲಗತಿಯಲ್ಲಿ ಅದು ನಡೆದುಕೊಂಡು ಹೋಗುತ್ತಿದೆ. ನಮಗೆ ಬಂದಿರತಕ್ಕ ಅವಕಾಶವನ್ನು ಉಪಯೋಗಿಸಿಕೊಂಡು ಹೆಚ್ಚು ಜನರಿಗೆ ಅನುಕೂಲವಾಗುವ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕೆಂಬ ಜವಾಬ್ದಾರಿ ನಮಗೆ ಸಾಕು ಎಂದೂ ನನ್ನ ಅನಿಸಿಕೆ. ಆದ್ದರಿಂದ ಈ ನಿರ್ಣಯವನ್ನು ತಂದ ಮಾನ್ಯ ತಿಮ್ಮಪ್ಪ ಹೆಗಡೆಯವರಿಗೆ ನನ್ನ ವಿವರಣೆಯನ್ನು ಕೊಟ್ಟಿದ್ದೇನೆ. ಅವರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಬಹಳ ವಿನಮ್ರನಾಗಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾ, ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್‌ನವರು ಏನು ಹೇಳಿದ್ದಾರೆ ಅದರ ಪ್ರಕಾರ ...ಣದ ಅವಶ್ಯಕತೆ ಬಹಳ ಇದೆ ಎಂಬುದನ್ನು ಹೇಳಿದರು. ನಾವು ಈ ಜನತಾ ಸರ್ಕಾರದ ಬಗ್ಗೆ ಬಹಳಷ್ಟು ವಿಶ್ವಾಸವನ್ನು ಇಟ್ಟು ಕೊಂಡಿದ್ದೆವು. ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ಏನು ಕೆಲಸ ಆಗಬೇಕೆಂದು ಅಲ್ಲಿನ ಜನರು ಕಳೆದ ೨೦–೩೦ ವರ್ಷಗಳಿಂದ ಅಪೇಕ್ಷೆಯನ್ನು ಇಟ್ಟು ಕೊಂಡಿದ್ದರೋ ಆ ಕೆಲಸವನ್ನು ಇವರು ಮಾಡುತ್ತಾರೆ ಎಂದು ನಾವು ಅಲ್ಲಿಂದ ಆರಿಸಿ ಬಂದಿರತಕ್ಕ ೯ ಜನ ಸದಸ್ಯರು ರಾಜಕೀಯವನ್ನು ತರಲಿಲ್ಲ ಕಾಂಗ್ರೆಸ್ ಪಕ್ಷದಲ್ಲಿರತಕ್ಕ ಮಾನ್ಯ ಸದಸ್ಯರಾದ ತಿಮ್ಮಪ್ಪ ಹೆಗಡೆಯವರು ಇವತ್ತು ಈ ನಿರ್ಣಯವನ್ನು ತಂದಿದ್ದಾರೆ. ಈ ಸಂದರ್ಭಗಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಕಳೆದಸಾರಿ ಶಿವಮೊಗ್ಗಾದಲ್ಲಿ ಹಿಂದಿನ ಮಂತ್ರಿ ಮಂಡಲ ಸಭೆ ಸೇರಿದ್ದಾಗ ಶಿವಮೊಗ್ಗಾದಲ್ಲಿ ಸಾಹ್ಯಾದ್ರಿ ಯೂನಿವರ್ಸಿಟಿ ಸ್ಥಾಪನೆ ಆಗಬೇಕೆಂಬ ತೀರ್ಮಾನವನು ಆ ಸಭೆಯಲ್ಲಿ ತೆಗೆದು ಕೊಂಡಿದ್ದರು. ಅದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಮಂಜೂರು ಕೂಡ ಮಾಡಿದ್ದರು. ಆದರೆ ಬೇರೆ ಯಾವುದೋ ಕಾರಣದಿಂದಾಗಿ ಆ ಕಾರ್ಯ ಮಾಡುವುದಕ್ಕಾಗಲಿಲ್ಲ. ಅದಕ್ಕೆ ಬಹುಶಃ ರಾಜಕೀಯ ಪ್ರಭಾವ ಇರಬಹುದು. ಹಿಂದೆ ಮಂಗಳೂರು ಮತ್ತು ಗುಲ್ಬರ್ಗಾ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಒಂದು ಏಕ ಸದಸ್ಯ ಆಯೋಗವನ್ನು ನೇಮಕಮಾಡಿದರು. ಆ ಆಯೋಗಗವರು ರಾಜ್ಯದ ಎಲ್ಲ ಕಡೆಗಳಲ್ಲೂ ಪ್ರವಾಸಮಾಡಿ ವಿಷಯಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಇವತ್ತಿನ

ದಿವಸ ಅತಿ ಕಡಿಮೆ ಖರ್ಚಿನಲ್ಲಿ ಶಿವಮೊಗ್ಗಾದಲ್ಲಿ ಸಾಹ್ಯಾದ್ರಿ ಯೂನಿವರ್ಸಿಟಿಯನ್ನು ಸ್ಥಾಪಿಸುವುದಕ್ಕೆ ಸಾಧ್ಯತೆ ಇದೆಯೆಂದು ವರದಿಯನ್ನು ಕೊಟ್ಟರು. ಈ ಸ್ಥಳವು ಗುಲ್ಬರ್ಗಾ ಮತ್ತು ಮಂಗಳೂರಿಗಿಂತ ಬಹಳ ಉಪಯುಕ್ತ ಸ್ಥಳವೆಂದು ಅವರು ತಿಳಿಸಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಅದಕ್ಕೆ ಒಂದು ಹಿನ್ನೆಲೆಯೂ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲಿ ಪಿ. ಜಿ. ಸೆಂಟರ್ ಇರುವುದನ್ನು ನೋಡಿಕೊಂಡು ವರದಿಯನ್ನು ಕೊಟ್ಟಿದ್ದಾರೆ. ಇವತ್ತು ಅದಕ್ಕೆ ನೀವು ಹಣದ ಕಾರಣವನ್ನು ಎತ್ತುವುದಾದರೆ ನಾವು ಒಂದು ಮಾತನ್ನು ಹೇಳ ಬೇಕಾಗುತ್ತದೆ. ಹಿಂದಿನ ಸರ್ಕಾರ ನಿಮ್ಮಂತೆ ಹಣದ ಕಾರಣವನ್ನೇ ಮುಂದಿಟ್ಟು ಕೊಂಡಿದ್ದರೆ ಅವತ್ತು ಗುಲ್ಬರ್ಗ ಮತ್ತು ಮಂಗಳೂರು ಯೂನಿವರ್ಸಿಟಿಗಳು ಪ್ರಾರಂಭ ವಾಗುತ್ತಿರಲಿಲ್ಲ. ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ನವರು ಹೇಳಿದಂತೆ, ಅವರ ಮಾರ್ಗದರ್ಶನದಲ್ಲಿ ನಾವು ನಡೆದಿದ್ದರೆ ಈ ಯೂನಿವರ್ಸಿಟಿಗಳು ಆಗುತ್ತಲೇ ಇರಲಿಲ್ಲ. ಮಾನ್ಯ ಗಜೇಂದ್ರ ಗಡ್ಕರ್‌ರವರು ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಒಂದು ಯೂನಿವರ್ಸಿಟಿಗೆ ಸಾಮಾನ್ಯವಾಗಿ ೩೦ ಕಾಲೇಜು ಗಳಿಗಿಂತ ಕಡಿಮೆ ಇರಬಾರದು, ಮತ್ತು ಅತಿ ಹೆಚ್ಚು ಎಂದರೆ ೬೫ ಕಾಲೇಜುಗಳಿಗಿಂತ ಹೆಚ್ಚು ಇರ ಬಾರದೆಂದು ಹೇಳಿದ್ದಾರೆ. ಆದರೆ ಇವತ್ತು ಮೈಸೂರು ಯೂನಿವರ್ಸಿಟಿಗೆ ೮೦ಕ್ಕಿಂತ ಹೆಚ್ಚು ಕಾಲೇಜು ಗಳು ಸೇರಿ ಸಂತೆಯಂತೆ ನಡೆಯುತ್ತಿದೆ. ಅದನ್ನು ವಿಭಾಗ ಮಾಡಿ ಸಹ್ಯಾದ್ರಿ ಯೂನಿವರ್ಸಿಟಿಗೆ ಕೆಲವು ಕಾಲೇಜುಗಳನ್ನು ಸೇರಿಸಿದರೆ ಪಿ. ಜಿ. ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲವಾಗುತ್ತದೆ. ಇಡೀ ಕರ್ನಾಟಕದಲ್ಲೇ ನಮ್ಮ ಶಿವಮೊಗ್ಗಾ ಜಿಲ್ಲೆಯು ಬಹಳ ಪ್ರಮುಖವಾದ ಜಿಲ್ಲೆ. ಅಲ್ಲಿ ಜೋಗದ ಜಲ ಪಾತ ಇದೆ. ಇದು ಇಡೀ ರಾಜ್ಯಕ್ಕೇ ವಿದ್ಯುಚ್ಛಕ್ತಿಯನ್ನು ಕೊಡುತ್ತದೆ. ಇಲ್ಲಿ ಎಲ್ಲ ಸಂಪನ್ಮೂಲಗಳೂ ಇವೆ. ಈ ಶಿವಮೊಗ್ಗಾದಲ್ಲಿ ಸಹ್ಯಾದ್ರಿ ಯೂನಿವರ್ಸಿಟಿ ಆಗಬೇಕೆಂದು ನಾವು ಬೇಡಿಕೆಯನ್ನು ಇಟ್ಟಾಗ ಹಣದ ಕೊರತೆ ಇದೆಯೆಂದು ಸರ್ಕಾರದವರು ಹೇಳುತ್ತಿದ್ದೀರಿ. ನಮ್ಮ ಜಿಲ್ಲೆಯ ಮಂತ್ರಿಗಳೂ ಮತ್ತು ಶಾಸಕರೆಲ್ಲರೂ ಕೂಡ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಾಗ ಅವರು ತಮ್ಮ ಸ್ಪಷ್ಟವಾದ ಶಬ್ದಗಳಲ್ಲಿ ಹೇಳಿದ್ದಾರೆ. ಖಂಡಿತ ಇಲ್ಲಿ ಯೂನಿವರ್ಸಿಟಿ ಆಗುವುದಕ್ಕೆ ಏನೇನು ವ್ಯವಸ್ಥೆ ಆಗಬೇಕೋ ಆ ಎಲ್ಲಾ ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಆಶ್ವಾಸನೆಯನು ಕೊಟ್ಟಿದ್ದಾರೆ ಅದು ಚರ್ಚೆಯಾಗುವ ಸಂದರ್ಭದಲ್ಲಿ ನಮ್ಮ ಜಿಲ್ಲಾ ಮಂತ್ರಿಗಳಾದ ಮಾನ್ಯ ಜೆ. ಹೆಚ್. ಪಟೇಲರು ಇರಲಿಲ್ಲ. ಈಗ ಅವರು ಬಂದಿದ್ದಾರೆ. ಹಣದ ಕೊರತೆಯನ್ನು ಮುಂದಿಟ್ಟು ಕೊಂಡು ನಮ್ಮ ಶಿವಮೊಗ್ಗಾದ ಯೂನಿವರ್ಸಿಟಿಯನ್ನು ಸ್ಥಾಪಿಸುವ ವಿಷಯವನ್ನು ಮುಂದೂಡುವುದು ಸರಿಯಲ್ಲ ನಮ್ಮಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ವ್ಯವಸ್ಥೆ ಸರಿಯಾಗಿಲ್ಲ ಅಲ್ಲಿರತಕ್ಕ ಶಾಲೆಗಳಲ್ಲಿ ಎಷ್ಟೋ ಕಡೆ ಉಪಾಧ್ಯಾಯರೇ ಇಲ್ಲ. ತಮಗೂ ಗೊತ್ತಿದೆ. ಭೂಮಿಯಲ್ಲಿರತಕ್ಕ ನೀರನ್ನು ಹೊರತೆಗೆದು ಜನರಿಗೆ ಕೊಡಲು ಸಾಧ್ಯವಾಗುತ್ತಿಲ್ಲ. ಇದೆಲ್ಲಾ ಕಾರಣಗಳನ್ನೂ ನಾವು ಒಪ್ಪಿಕೊಳ್ಳಬಹುದು. ಆದರೆ [illegible] ಸಂಧರ್ಭದಲ್ಲಿ ಶಿವಮೊಗ್ಗಾ ಜಿಲ್ಲೆಯಲ್ಲಿ ಜನರ ಅಪೇಕ್ಷೆಯನ್ನು ಪೂರೈಸುವುದರಲ್ಲಿ ಜನತಾ ಸರ[illegible] ಹಿಂದೆ ಬೀಳುವುದಿಲ್ಲ, ಅಲ್ಲಿ ಯೂನಿವರ್ಸಿಟಿಯನ್ನು ಪ್ರಾರಂಭ ಮಾಡುತ್ತದೆ ಇದಕ್ಕಾಗಿ ಹಣ[illegible] ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಮಾಡಿಕೊಳ್ಳುತ್ತದೆ ಎನ್ನುವ ಮಾತನ್ನು ಜನತಾ ಪಕ್ಷದಲ್ಲಿರತಕ್ಕ ನೀ[illegible] ಹೇಳಬೇಕಾಗಿದೆ. ಇದು ನಮ್ಮ ಶಿವಮೊಗ್ಗಾ ಜಿಲ್ಲೆಯ ಜನರ ಅಪೇಕ್ಷೆಯಾಗಿದೆ.

ಆದ್ದರಿಂದ ವೈಯಕ್ತಿಕವಾಗಿ ನಾನು ಜನತಾ ಸರ್ಕಾರದ ಮಂತ್ರಿಗಳನ್ನು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ, ದಯವಿಟ್ಟು ಯಾವುದೇ ಕಾರಣವನ್ನು ಒಡ್ಡಿ ಮುಂದೂಡ ತಕ್ಕಂಥ ಕೆಲಸ ಮಾಡ ಬಾರದು. ಈವತ್ತು ಬೇರೆಯವರು ಅಂದರೆ ಮಾನ್ಯ ಎಲ್. ಟಿ. ತಿಮ್ಮಪ್ಪ ಹೆಗಡೆಯವರು ಮಾತ ನಾಡಿರತಕ್ಕಂಥ ವಿಷಯವಾಗಿದ್ದರೂ ಇದು ಮೂರು ಜಿಲ್ಲೆಗಳಿಗೆ ಅನುಕೂಲವಾಗತಕ್ಕಂಥ ವಿಶ್ವವಿದ್ಯಾ ನಿಲಯವಾಗುತ್ತದೆ. ಅಲ್ಲಿ ಪಿ ಜಿ ಸೆಂಟರ್ ಕೊಟ್ಟಿರುತ್ತಾರೆ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ ರವರು ಮಂಜೂರಾತಿಯನ್ನು ಕೊಟ್ಟಿರುತ್ತಾರೆ. ಇದಕ್ಕಾಗಿ ೪೬೦ ಎಕರೆ ಜಮೀನನ್ನು ಕೊಟ್ಟಿರುತ್ತಾರೆ ಎಲ್ಲಾ ಅನುಕೂಲತೆಗಳನ್ನು ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಇದನ್ನು ಯಾವ ಕಾರಣಕ್ಕಾಗಿಯೂ ಮುಂದೂಡಲಾಗದು. ಮುಖ್ಯವಾಗಿ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಆಶ್ವಾಸನೆಯನ್ನು ಕೊಟ್ಟಿ ದ್ದಾರೆಆದ್ದರಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ. ಈ ವರ್ಷವೇ ಈ ವಿಶ್ವವಿದ್ಯಾನಿಲಯವ ನ್ನು ಪ್ರಾರಂಭವಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏತಕ್ಕೆ ಹೇಳುತ್ತೇನೆಂದರೆ, ಮಾನ್ಯ ಮಂತ್ರಿಗಳಾದ

ಜೆ. ಎಚ್. ಪಟೇಲರು ಆ ಒಂದು ಜಿಲ್ಲೆಯಿಂದಲೇ ಆರಿಸಿ ಬಂದವರಾಗಿರುತ್ತಾರೆ. ಆದ್ದರಿಂದ ದಯವಿಟ್ಟು ಈ ಬಗ್ಗೆ ಒಂದು ತೀರ್ಮಾನವನ್ನು ತಾವು ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಈ ಚಿನ್ಹೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬಾರದು ಎಂದು ನಾನು ಹೇಳಲಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮನಸ್ಸಿಲ್ಲವೆಂದು ಹೇಳಿ,

ಶ್ರೀ ಎ, ಲಕ್ಷ್ಮೀಸಾಗರ್.—ಮನಸ್ಸಿಲ್ಲವೆಂದು ಹೇಳುವುದು ಅನ್‌ಚಾರಿಟಬಲ್. ಮನಸ್ಸಿಗೆ ಬರಲಿಲ್ಲವೆಂದು ಹೇಳುವವರಿಗೆ ಏನುಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರಕೆ ಇದರ ಬಗ್ಗೆ ಬಹಳ ಕಳಕಳಿಯಿಂದ ಇದೆ. ನಾನೂ ಕೂಡ ಮನಸ್ಸಿಗೆ ತೆಗೆದುಕೊಂಡಿದ್ದೇನೆ ಎನ್ನುವ ಮಾತನ್ನು ಮೊದಲೇ ಹೇಳಿದ್ದೇನೆ, ಆದ್ದರಿಂದ ಇದನ್ನು ಮಾಡಬಾರದು ಎಂದು ಹೇಳಲಿಲ್ಲ, ಸ್ವಲ್ಪ ತಡವಾಗಬಹುದು, ಏತಕ್ಕೆಂದರೆ ಹಣದ ಕೊರತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಉಪಸಭಾಧ್ಯಕ್ಷರೇ ಸಹ್ಯಾದ್ರಿ ವಿಶ್ವವಿದ್ಯಾನಿಲಯದ ಬಗ್ಗೆ ಮತ್ತು ದೇಶದಲ್ಲಿರತಕ್ಕಂತ ವಿಶ್ವವಿದ್ಯಾನಿಲಯದ ಬಗ್ಗೆ ನಾನು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ವೈಯಕ್ತಿಕವಾಗಿ ವಿಶ್ವವಿದ್ಯಾನಿಲಯಗಳ ಸಂಖ್ಯೆಯನ್ನು ಹೆಚ್ಚಿಸತಕ್ಕಂಥಾದ್ದು ಆಕರ್ಷಣೀಯವಲ್ಲ. ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ ಅದನ್ನು ನಾನು ಹಿಂದಿನ ಸರ್ಕಾರಕ್ಕೆ ಮನವರಿಕೆ ಮಾಡಿಕೊಂಡಿದ್ದೇನೆ. ಶಿವಮೊಗ್ಗದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವ ಬಗ್ಗೆ ಹಿಂದಿನ ಸರ್ಕಾರ ರಾಜಕೀಯವಾಗಿ ಅದನ್ನು ಹೇಳಿದ್ದಾರೆ. ಹೋದವರ್ಷ ಕಾರ್ಯಕ್ರಮದಲ್ಲಿ ಇದ್ದಂಥ ಮೂರು ವಿಶ್ವವಿದ್ಯಾನಿಲಯಗಳ ಪೈಕಿ ಶಿವಮೊಗ್ಗ ಜಿಲ್ಲೆಯ ಅವಶ್ಯಕತೆಯ ಬಗ್ಗೆ ಹೇಳಿ ಯೂನಿವರ್ಸಿಟಿ ಆಡಳಿತ ತಜ್ಞರು ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಮೊದಲೇ ಪ್ರಾರಂಭ ಮಾಡಬೇಕಿತ್ತು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈಗ ನಮ್ಮ ಸರ್ಕಾರ ಬಂದ ತಕ್ಷಣ ಮಾನ್ಯ ಮಂತ್ರಿಗಳು ನಾವು ಜಿಲ್ಲೆಗೆ ಹೋದಾಗ ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ಸರ್ಕಾರ ಮಾಡಿದಂಥ ತೀರ್ಮಾನ ಕಾರ್ಯಗತ ಮಾಡತಕ್ಕಂಥ ಜವಾಬ್ದಾರಿಯನ್ನು ಹೊಂದಿ ಕಮಿಟಿ ಮಾಡಿಕೊಂಡಿರುವುದರಿಂದ ಸ್ವಲ್ಪಕಾಲದ ಅವಕಾಶ ಬೇಕಾಗುತ್ತದೆ. ಈ ವರ್ಷವೇ ಶುರುಮಾಡುತ್ತೇವೆಂದು ಹೇಳಲಾಗುವುದಿಲ್ಲ. ನಾವು ೧೫-೨೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕು. ಆಗ ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್‌ರವರು ಒಪ್ಪಿಕೊಳ್ಳುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಭೂಮಿಯೆಲ್ಲಾ ತೆಗೆದುಕೊಂಡಿರುತ್ತಾರೆ. ಅಲ್ಲಿ ಪೋಸ್ಟ್ ಗ್ರಾಜುಯೇಟ್ಸ್ ಸೆಂಟರ್ ಕೂಡ ಇದೆ. ಎರಡೂವರೆ ಕೋಟಿ ಹಣ ಖರ್ಚು ಮಾಡುವುದಕ್ಕೆ ಈಗಾಗಲೇ ಸುಮಾರು ಹಣ ಖರ್ಚಾಗಿದೆ.

ಶ್ರೀ ಜೆ. ಹೆಚ್. ಪಟೇಲ್.—ಅದರೊಳಗೆ ಒಂದು ಸೂಕ್ಷ್ಮ ಇದೆ.

ಶ್ರೀ ಕೆ. ಹೆಚ್. ರಂಗನಾಥ್.—ಈಗಾಗಲೇ ಸರ್ಕಾರ ಕೊಟ್ಟಿರತಕ್ಕಂಥ ಭೂಮಿ ಲೆಕ್ಕ ಹಾಕಿದರೆ ಎರಡೂವರೆ ಕೋಟಿ ರೂಪಾಯಿಗಳಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುವ ಬಗ್ಗೆ ಮಾನ್ಯ ಯಡಿಯೂರಪ್ಪನವರು ಸ್ವಲ್ಪ ಯೋಚನೆ ಮಾಡಬೇಕಾಗಿದೆ.

ಶ್ರೀ ಕೆ. ಜಿ ಮಹೇಶ್ವರಪ್ಪ.—ಎರಡೂವರೆ ಕೋಟಿ ರೂಪಾಯಿಗಳನ್ನು ನಾವು ದಾವಣಗೆರೆಯವರು ಒಂದು ವಾರದಲ್ಲಿಯೇ ಡಿಪಾಜಿಟ್ ಮಾಡುತ್ತೇವೆ. ಅಲ್ಲಿಗೆ ಯೂನಿವರ್ಸಿಟಿಯನ್ನು ಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ನೋಡೋಣ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಅವರು ಈ ನಿರ್ಣವನ್ನು ಒತ್ತಾಯ ಮಾಡುವುದು ಬೇಡ. ಸರ್ಕಾರದವರು ಒಪ್ಪಿಕೊಂಡಿರುತ್ತಾರೆ. ಈ ವಿಷಯದ ಬಗ್ಗೆ ವಿರೋದ ಇಲ್ಲದೇ ಇರುವುದರಿಂದ ಒತ್ತಾಯ ಮಾಡುದು ಬೇಡ. ಆದ್ದರಿಂದ ಇದನ್ನು ತಿರಸ್ಕರಿಸಲಾಗಿದೆ.

MR. CHAIRMAN. Since the mover of the Resolution Sri L. T. Thimmappa Hegde is not present, I will put the resolution to the vote of the House. The quetion is-

> This House urgest the Government to take neccssary steps to start Sahyadri University during the current academic year at Lakkavalli which is the post-Graduation Centre for Shivomoga, Chikkamagalur and Chitradurga District.

The Resolution was negatived.

(*ii*) ವಿಜಯನಗರದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುವ ಬಗ್ಗೆ

ಶ್ರೀ ಪಿ. ರಾಮ್‌ದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ನನ್ನ ನಿರ್ಣಯವು ಈ ರೀತಿ ಇದೆ. ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ವಿಳಂಬ ವಿಲ್ಲದಂತೆ ಸ್ಥಾಪಿಸಲು ಕೇಂದ್ರ ಸರ್ಕಾರದ ಮೇಲೆ ರಾಜ್ಯಸರ್ಕಾರದವರು ತ್ರೀವ ಒತ್ತಡವನ್ನು ತರಬೇಕೆಂದು ಈ ಸಭೆಯು ಶಿಫಾರಸು ಮಾಡುತ್ತದೆ?

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಪಿ. ರಾಮ್‌ದೇವ್.—ಮಾನ್ಯ ವಿರೋಧಪಕ್ಷದ ನಾಯಕರು ಜವಾಬ್ದಾರಿ ಹೊತ್ತಿರಬೇಕಾದ್ದು ಮಂತ್ರಿಗಳು ಎಂದು ಹೇಳಿದರು. ಸ್ವಾಮಿ, ಈ ನಿರ್ಣಯ ಬಹಳ ಮಹತ್ವದ ಸನ್ನಿವೇಶದಲ್ಲಿ ಬಂದಿದೆ ಎಂದು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಜುಲೈ ೧೫ ರಂದು ಶ್ರೀಮತಿ ಇಂದಿರಾಗಾಂಧಿಯವರು ಬೆಂಗಳೂರಿಗೆ ಭೇಟಿ ಕೊಟ್ಟರು. ಜುಲೈ ೧೫ ರಂದು ಲಾಲ್‌ಬಾಗ್‌ನಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಾ, ವಿಜಯನಗರದ ಉಕ್ಕಿನ ಕಾರ್ಖಾನೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸದ್ಯಕ್ಕೆ ಸಾಧ್ಯವಿಲ್ಲ ಎಂದು ಹೇಳಿರುತ್ತಾರೆ. ಈ ರೀತಿ ಮಾನ್ಯ ಪ್ರಧಾನಿಯವರು ಸ್ಪಷ್ಟವಾಗಿ ಹೇಳಿದ್ದು ಪತ್ರಿಕೆಗಳಲ್ಲಿ ಬಂದಿರುತ್ತದೆ. ೧೯೭೧ ಅಕ್ಟೋಬರ್ ೧೪ ರಂದು ಇದೇ ಶ್ರೀಮತಿ ಇಂದಿರಾಗಾಂಧಿಯವರು, ಅಂದಿನ ಪ್ರಧಾನಿಯಾಗಿ ವಿಜಯನಗರದ ಉಕ್ಕಿನ ಕಾರ್ಖಾನೆಯ ಶಂಕುಸ್ಥಾಪನೆಯನ್ನು ಮಾಡಿದರು. ೧೯೭೧ ರಿಂದ ೮೩ರ ವರೆಗೆ ಈ ಉಕ್ಕಿನ ಕಾರ್ಖಾನೆ ಉಕ್ಕಿನಷ್ಟೇ ಕಟುವಾಗಿ ನಿಂತಿದೆ ಎಂದು ಹೇಳಿದರೆ ತಪ್ಪಾಗಲಾರದು. ಶ್ರೀಮತಿ ಇಂದಿರಾಗಾಂಧಿಯವರು ೧೯೭೧ರಲ್ಲಿ ಈ ಕಾರ್ಖಾನೆಯ ಶಂಕುಸ್ಥಾಪನೆ ಮಾಡಿದಾಗ ಬಹಳ ಚೆನ್ನಾಗಿ ಮಾತನಾಡಿ ಇದು ಕರ್ನಾಟಕಕ್ಕೆ ಕೊಡತಕ್ಕಂಥ ಒಂದು ದೊಡ್ಡ ಕೊಡುಗೆ ಎನ್ನುವ ಮಾತನ್ನು ಆಡಿದರು. ಆದರೆ ಇದೇ ಶ್ರೀಮತಿ ಇಂದಿರಾ ಗಾಂಧಿಯವರು ಕನ್ನಡಿಗರ ಆಶೋತ್ತರ ಏನು ಇದೆ ಆ ಆಶೋತ್ತರದಮೇಲೆ ಒಂದು ದೊಡ್ಡ ಬಾಂಬನ್ನು ಎಸೆದಿದ್ದಾರೆ. ಕನ್ನಡಿಗರಿಗೆ ಒಂದು ಅಪಮಾನ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದೆಂದು ನನಗನಿಸುತ್ತದೆ. ಸ್ವಾಮಿ, ಹಿಂದೆ ಶ್ರೀಯುತ ಗುಂಡೂರಾಯರು ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ಇದೇ ಸದನದಲ್ಲಿ ಒಂದು ನಿರ್ಣಯವನ್ನು ಮಾಡಿದರು. ಆಗ ಮಾನ್ಯ ಗುಂಡೂರಾವ್ ಅವರು ಏನು ಹೇಳಿದ್ದಾರೆಂದರೆ, ನಾನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿದ್ದೇನೆ ಮತ್ತು ೧೯೪೭ ರಿಂದ ಇಲ್ಲಿಯವರೆಗೆ ಮುಖ್ಯಮಂತ್ರಿಗಳಾಗಿ ಆರಿಸಿಬಂದಂಥ ಯಾರೂ ಸಹ ಶ್ರೀಮತಿ ಇಂದಿರಾಗಾಂಧಿಯವರ ಸನಿಹದಲ್ಲಿಗಲಿಲ್ಲ, ಆದರೆ ನಾನು ಅವರ ಸನಿಹದಲ್ಲಿಯೇ ಇರುವುದರಿಂದ ಏನು ಹೇಳಿದರೂ ಮಾಡುತ್ತಾರೆ ಮತ್ತು ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಕೇಂದ್ರಸರ್ಕಾರದಿಂದ ಅನುಮತಿ ಸಿಕ್ಕಿದೆ ಅನ್ನುತಕ್ಕಂಥ ಮಾತನ್ನು ಹೇಳಿ ಇದೇ ಸಭೆಯಲ್ಲಿ ಒಂದು ನಿರ್ಣಯವನ್ನು ಸಹ ಪಾಸ್ ಮಾಡಿದ್ದಾರೆ. ಆದರೆ ಇದೆಲ್ಲಾ ಸ್ಟಂಟ್ ಎಂಬುದು ಈಗ ತಿಳಿಯುತ್ತಿದೆ. ಸ್ಟಂಟ್‌ನಿಂದಲೇ ಈ ರಾಜ್ಯವನ್ನು ನಡೆಸಿಕೊಂಡು ಬಂದರು. ಈ ಉಕ್ಕಿನ ಕಾರ್ಖಾನೆ ಸ್ಥಾಪನೆ ವಿಷಯ ಮಾತ್ರ ದೂರದೂರ ಸರಿಯುತ್ತಾ ಬಂತು. ಅದು